

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–04–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಖುತ್ಬಕ್ಕೆ ಹಿಂದಿನ ಖುತ್ಬದಲ್ಲಿ ಹಝ್ರತ್ ಅಬೂಬಕರ್(ರ) ಧರ್ಮತ್ಯಾಗಿಗಳ ವಿರುದ್ಧ ಎತ್ತಿದ್ದ ನಡವಳಿಕೆ ಕ್ರಮಗಳ ಕುರಿತು ಪ್ರಸ್ತಾಪಿಸುತ್ತಿದ್ದೆ. ಧರ್ಮತ್ಯಾಗಿಗಳಿಗೆ ಅವರ ಧರ್ಮತ್ಯಾಗದ ಕಾರಣದಿಂದ ಹಝ್ರತ್ ಅಬೂಬಕರ್(ರ) ಶಿಕ್ಷೆ ನೀಡಿರಲಿಲ್ಲ ಬದಲಾಗಿ ವಿದ್ರೋಹ ಮತ್ತು ಯುದ್ಧ ಮಾಡಿದ ಕಾರಣದಿಂದ ಅವರನ್ನು ಶಿಕ್ಷಿಸಲಾಗಿತ್ತು ಎಂದು ಅನೇಕ ಉಲ್ಲೇಖಗಳಿಂದ ಸಾಬೀತಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್(ಅ) ಕೂಡ ಈ ಧರ್ಮತ್ಯಾಗವನ್ನು ವಿದ್ರೋಹ ಮತ್ತು ವಂಚನೆಯಾಗಿತ್ತು ಎಂದು ಬಣ್ಣಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಇಸ್ಲಾಂ ಮತ್ತು ಮುಸ್ಲಿಮರ ಮೇಲೆ ಆಪತ್ತುಗಳು ಬಂದೆರಗಿತು. ಅನೇಕ ಕಪಟವಿಶ್ವಾಸಿಗಳು ಧರ್ಮತ್ಯಾಗಿಗಳಾದರು. ಸುಳ್ಳುವಾದಿಗಳ ಒಂದು ಗುಂಪು ಪ್ರವಾದಿತ್ವವನ್ನು ವಾದಿಸಿತು. ಮುಸೈಲಿಮ ಕಧ್ಧಾಬ್‌ನ ಜೊತೆಗೆ ಸುಮಾರು ಒಂದು ಲಕ್ಷದಷ್ಟು ಮೂಢ ಮತ್ತು ದುಸ್ವಭಾವಿಗಳಾದ ಜನರು ಸೇರಿದರು. ಪಿತೂರಿಗಳು ಬಹಳ ವರ್ಧಿಸಿದುವು. ಸತ್ಯವಿಶ್ವಾಸಿಗಳ ಮೇಲೆ ಕಠಿಣವಾದ ಭೂಕಂಪದ ಸ್ಥಿತಿಯುಂಟಾಯಿತು. ಅಂತಹ ಸಮಯದಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಖಲೀಫರನ್ನಾಗಿ ಮಾಡಲಾಯಿತು.

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ನನ್ನ ತಂದೆಯನ್ನು ಖಲೀಫರನ್ನಾಗಿ ಮಾಡಲಾದಾಗ, ಖಿಲಾಫತಿನ ಆರಂಭದಲ್ಲೇ ಅವರು ಎಲ್ಲ ರೀತಿಯ ಪಿತೂರಿಗಳ ಅಲೆ ಏಳುವುದನ್ನು, ಸುಳ್ಳುಪ್ರವಾದಿಗಳ ಕಾರ್ಯಾಚರಣೆಗಳನ್ನು ಮತ್ತು ಕಪಟವಿಶ್ವಾಸಿಗಳ ದಂಗೆಗಳನ್ನು ನೋಡಿದರು. ಅವರ ಮೇಲೆ ಎಷ್ಟು ವಿಪತ್ತುಗಳು ಬಂದೆರಗಿದುವು ಎಂದರೆ, ಅವುಗಳು ಪರ್ವತಗಳ ಮೇಲೆ ಬೀಳುತ್ತಿದ್ದರೆ, ಅವುಗಳು ನೆಲಸಮವಾಗುತ್ತಿದ್ದುವು. ಆದರೆ ಅವರಿಗೆ ಪ್ರವಾದಿಗಳಂತಹ ಸಹನೆಯನ್ನು ದಯಪಾಲಿಸಲಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಕೊನೆಗೆ ಅಲ್ಲಾಹನ ಸಹಾಯ ತಲುಪಿತು. ಸುಳ್ಳುಪ್ರವಾದಿ ಕೊಲ್ಲಲ್ಪಟ್ಟನು. ಧರ್ಮತ್ಯಾಗಿಗಳನ್ನು ನಾಶಮಾಡಲಾಯಿತು. ಪಿತೂರಿಗಳನ್ನು ನೀಗಿಸಲಾಯಿತು. ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಆಪತ್ತುಗಳಿಂದ ರಕ್ಷಿಸಿ ಅವರ ಭಯದ ಸ್ಥಿತಿಯನ್ನು ನೆಮ್ಮದಿಯನ್ನಾಗಿ ಬದಲಾಯಿಸಿದನು. ಧರ್ಮವನ್ನು ಸುದೃಢಗೊಳಿಸಿದನು. ಒಂದು ಲೋಕವನ್ನೇ ಸತ್ಯದಲ್ಲಿ ನೆಲೆನಿಲ್ಲಿಸಿದನು. ಪಿತೂರಿಗಾರರ ಮುಖಗಳಲ್ಲಿ ಇರುಳು ಕವಿಯಿತು. ಅಲ್ಲಾಹನು ತನ್ನ ವಾಗ್ದಾನವನ್ನು ಈಡೇರಿಸಿದನು. ಆ ಕಷ್ಟತೆಗಳ ನಂತರ ಸತ್ಯವಿಶ್ವಾಸಿಗಳ ಹೃದಯಗಳು ಬೆಳಗಿದುವು ಮತ್ತು ಮುಖಗಳು ಪ್ರಸನ್ನಗೊಂಡುವು. ಸಹಾಬರು ಹಝ್ರತ್ ಅಬೂಬಕರ್(ರ)ರನ್ನು ಒಬ್ಬ ಅನುಗ್ರಹೀತ ವ್ಯಕ್ತಿಯೆಂದೂ ಪ್ರವಾದಿಗಳಂತೆ ಅಲ್ಲಾಹನ ಸಹಾಯ ಲಭಿಸುತ್ತಿರುವ ವ್ಯಕ್ತಿಯೆಂದೂ ಅರಿತುಕೊಂಡಿದ್ದರು. ಇವೆಲ್ಲವೂ ಹಝ್ರತ್ ಅಬೂಬಕರ್(ರ)ರ ಸತ್ಯಸಂಧತೆ ಮತ್ತು ಗಾಢವಾದ ದೃಢವಿಶ್ವಾಸದ ಕಾರಣದಿಂದ ಆಗಿತ್ತು.

ವಿದ್ರೋಹಿಗಳನ್ನು ಬೇರುಸಹಿತ ಕಿತ್ತುಹಾಕಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಸೈನ್ಯವನ್ನು ವಿಂಗಡಿಸಿದರು. ಹನ್ನೊಂದು ಸೇನಾಧಿಪತಿಗಳಿಗೆ ಇಸ್ಲಾಮಿನ ಧ್ವಜಗಳನ್ನು ನೀಡಿ ವಿವಿಧ ಪ್ರದೇಶಗಳಿಗೆ ಯುದ್ಧಕ್ಕಾಗಿ ಕಳುಹಿಸಿದರು. ಪ್ರತಿಯೊಂದು ಸಂಘದ ಸೇನಾಧಿಪತಿಗಳಿಗೆ ಹಝ್ರತ್ ಅಬೂಬಕರ್(ರ) ಹೀಗೆ ಆದೇಶ ನೀಡಿದರು: ನೀವು ದಾಟಿಹೋಗುವ ಪ್ರದೇಶಗಳಿಂದ ಶಕ್ತಿಶಾಲಿ ಮುಸ್ಲಿಮರಲ್ಲಿ ಕೆಲವರನ್ನು ತಮ್ಮ ಜೊತೆಗೆ ಸೇರಿಸಿರಿಕೊಳ್ಳಿರಿ ಮತ್ತು ಕೆಲವು ಸಮರ್ಥ ವ್ಯಕ್ತಿಗಳನ್ನು ಅಲ್ಲೇ ತಮ್ಮ ಪ್ರದೇಶಗಳ ಸಂರಕ್ಷಣೆಗಾಗಿ ಬಿಟ್ಟುಬಿಡಿರಿ.

ಹಝ್ರತ್ ಅಬೂಬಕರ್(ರ)ರ ಈ ವಿಂಗಡನೆಯ ಬಗ್ಗೆ ಪ್ರಸ್ತಾಪಿಸುತ್ತಾ ಒಬ್ಬ ಲೇಖಕ ಬರೆಯುತ್ತಾರೆ: ಈ ಯುದ್ಧಕಾರ್ಯಾಚರಣೆಗಳಿಗಾಗಿ ಧುಲ್‌ಖುಸ್ಸಾವನ್ನು ಸೇನಾ ಕೇಂದ್ರವನ್ನಾಗಿ ಮಾಡಲಾಯಿತು. ಇಲ್ಲಿಂದ ಸುಸಂಘಟಿತ ಇಸ್ಲಾಮಿಕ ಸೈನ್ಯಗಳು ಧರ್ಮತ್ಯಾಗದ ಚಳುವಳಿಯನ್ನು ತುಳಿದುಹಾಕಲಿಕ್ಕಾಗಿ ವಿವಿಧ ಪ್ರದೇಶಗಳ ಕಡೆಗೆ ಹೋದುವು. ಸೈನಿಕ ತುಕಡಿಗಳ ವಿಂಗಡನೆ ಮತ್ತು ಅವುಗಳಿಗೆ ನಿಶ್ಚಯಿಸಲಾದ ಪ್ರದೇಶಗಳಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಅಬೂಬಕರ್(ರ)ರಿಗೆ ಭೂಗೋಳಶಾಸ್ತ್ರದ ಸೂಕ್ಷ್ಮವಾದ ಅರಿವು ಇತ್ತು ಎಂದಾಗಿದೆ. ಅವರಿಗೆ ಜನವಸತಿ ಪ್ರದೇಶಗಳ ಮತ್ತು ಅರಬ್ ಭೂಖಂಡದ ರಸ್ತೆಗಳ ಸರಿಯಾದ ಅರಿವು ಇತ್ತು ಎಂದು ಇದರಿಂದ ಗೊತ್ತಾಗುತ್ತದೆ. ಸೈನ್ಯಗಳೊಂದಿಗೆ ಅವರ ಸಂಪರ್ಕ ಅತ್ಯಂತ ಸೂಕ್ಷ್ಮವಾಗಿತ್ತು. ಸಂಪೂರ್ಣ ಸೈನ್ಯ ಪರಸ್ಪರ ಸಂಪರ್ಕದಲ್ಲಿತ್ತು. ಇದು ಖಿಲಾಫತಿನ ಮುಖ್ಯವಾದ ಸಾಧನೆಗಳಲ್ಲಿ ಒಂದಾಗಿತ್ತು. ಏಕೆಂದರೆ, ಈ ಸೈನ್ಯಗಳಲ್ಲಿ ನೇತೃತ್ವದ ಪ್ರಾವೀಣ್ಯದೊಂದಿಗೆ ಅತ್ಯುತ್ತಮ ವ್ಯವಸ್ಥೆ ಕೂಡ ಇತ್ತು. ಧರ್ಮತ್ಯಾಗಿಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದರು. ಕೆಲವೇ ತಿಂಗಳಲ್ಲಿ ಸಂಪೂರ್ಣ ಮುಸ್ಲಿಮರನ್ನು ಮುಕ್ತಾಯಗೊಳಿಸುವೆವು ಎಂದು ಅವರು ಭಾವಿಸಿಕೊಂಡಿದ್ದರು. ಆದ್ದರಿಂದಲೇ ಬೇಗನೇ ಅವರ ವೈಭವ ಮತ್ತು ಶಕ್ತಿಯನ್ನು ಕೊನೆಗೊಳಿಸಲು ಹಝ್ರತ್ ಅಬೂಬಕರ್(ರ) ಬಯಸಿದ್ದರು. ಅವರ ಪಿತೂರಿಗಳು ವರ್ಧಿಸುವುದಕ್ಕೆ ಮುಂಚಿತವಾಗಿಯೇ ಕ್ರಮ ಕೈಗೊಂಡರು ಮತ್ತು ಅವರಿಗೆ ತಲೆಯೆತ್ತಲು ಮತ್ತು ಮುಸ್ಲಿಮರಿಗೆ ತೊಂದರೆ ಕೊಡಲು ಅವಕಾಶವನ್ನೇ ನೀಡಲಿಲ್ಲ.

ಹಝ್ರತ್ ಅಬೂಬಕರ್(ರ)ರ ವತಿಯಿಂದ ನೇತಾರರ ನೇಮಕಕ್ಕೆ ಸಂಬಂಧಿಸಿ ಅನೇಕ ವಿಷಯಗಳನ್ನು ಪ್ರಸ್ತಾಪಿಸುತ್ತಾ ಮತ್ತೊಬ್ಬ ಲೇಖಕರಾದ ಡಾಕ್ಟರ್ ಅಲಿ ಮುಹಮ್ಮದ್ ಸಲಾಬಿ ಬರೆಯುತ್ತಾರೆ: ಖಿಲಾಫತಿನ ಕೇಂದ್ರವಾದ ಮದೀನದ ಸಂರಕ್ಷಣೆಗಾಗಿ ಹಝ್ರತ್ ಅಬೂಬಕರ್(ರ) ಸೈನ್ಯದ ಒಂದು ತುಕಡಿಯನ್ನು ತನ್ನ ಬಳಿ ಇರಿಸಿದರು. ಅದೇ ರೀತಿಯಲ್ಲಿ ಆಡಳಿತ ವಿಷಯಗಳಲ್ಲಿ ಸಲಹೆ ಮತ್ತು ಸಮಾಲೋಚನೆಗಾಗಿ ಶ್ರೇಷ್ಠ ಸಹಾಬಿಯರ ಒಂದು ಸಂಘವನ್ನು ಸಹ ತನ್ನ ಬಳಿ ಇರಿಸಿಕೊಂಡರು. ಸೇನಾಧಿಪತಿಗಳಿಗೆ ಅವರು ಹೀಗೆ ಆದೇಶ ನೀಡಿದರು: ಧರ್ಮತ್ಯಾಗದಿಂದ ಪ್ರಭಾವಿತರಾದ ಪ್ರದೇಶಗಳಲ್ಲಿ ಇರುವ ಮುಸ್ಲಿಮರಲ್ಲಿ ಶಕ್ತರಾದ ಕೆಲವರನ್ನು ನಿಮ್ಮ ಜೊತೆಗೆ ಸೇರಿಸಿರಿ ಮತ್ತು ಆ ಪ್ರದೇಶಗಳ ಸಂರಕ್ಷಣೆಗಾಗಿ ಕೆಲವು ವ್ಯಕ್ತಿಗಳನ್ನು ಅಲ್ಲೇ ನಿಶ್ಚಯಿಸಿರಿ. ಧರ್ಮತ್ಯಾಗಿಗಳೊಂದಿಗೆ ಯುದ್ಧ ಮಾಡುವಾಗ ಹಝ್ರತ್ ಅಬೂಬಕರ್(ರ) **"ಅಲ್‌ಹರ್‌ಬು ಖುದ್‌ಅತುನ್"** ಎಂಬ ತತ್ವವನ್ನು ಸ್ವೀಕರಿಸಿಕೊಂಡಿದ್ದರು. (ಅರ್ಥ: ಯುದ್ಧ ಒಂದು ತಂತ್ರವಾಗಿದೆ.) ಎಂದರೆ ಸೈನ್ಯದ ಕಾರ್ಯಾಚರಣೆ ಇಂತಿಂಥದ್ದಾಗಿವೆ ಎಂದು ಭಾಸವಾಗುವಂತೆ ಮಾಡುವುದು, ಆದರೆ ಉದ್ದೇಶಗಳು ಬೇರೆಯೇ ಆಗಿರುತ್ತವೆ. ಈ ರೀತಿಯಾಗಿ ಹಝ್ರತ್ ಅಬೂಬಕರ್(ರ)ರ ನೇತೃತ್ವದಲ್ಲಿ ರಾಜಕೀಯ ನೈಪುಣ್ಯತೆ, ಅನುಭವ ಜ್ಞಾನ, ಆಳವಾದ ಅರಿವು ಹಾಗೂ ದೈವಿಕ ಸಹಾಯ ಮತ್ತು ವಿಜಯ ಎದ್ದು ಕಾಣಬಹುದಾಗಿದ್ದುವು.

ಈ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಎರಡು ಆದೇಶಗಳನ್ನು ಕೂಡ ಹೊರಡಿಸಿದ್ದರು. ಒಂದು ಅರಬ್ ಗೋತ್ರಗಳ ಹೆಸರಲ್ಲಿ, ಮತ್ತೊಂದು ಸೈನ್ಯದ ಸೇನಾಧಿಪತಿಗಳ ಹೆಸರಲ್ಲಿ. ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥವಾದ 'ಸಿರ್‍ರುಲ್‌ಖಿಲಾಫ'ದಲ್ಲಿ ಅರಬ್ ಗೋತ್ರಗಳ ಹೆಸರಲ್ಲಿ ಬರೆದ ಪತ್ರದ ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು: ನಾವಿಲ್ಲಿ ಆ ಪತ್ರವನ್ನು ನಮೂದಿಸುವುದು ಅನುಯೋಜ್ಯವೆಂದು ಭಾವಿಸುತ್ತೇವೆ. ಈ ಪತ್ರದ ಬಗ್ಗೆ ತಿಳಿಯುವವರು ಅಲ್ಲಾಹನ ಮಹಿಮೆ ಪ್ರಕಟಗೊಳ್ಳುವ ಸ್ಥಳಗಳ ಮತ್ತು ಹಝ್ರತ್ ಪೈಗಂಬರ್(ಸ)ರ ಎಲ್ಲ ಸುನ್ನತ್‌ಗಳ ಸಂರಕ್ಷಣೆಗಾಗಿ ಹಝ್ರತ್ ಅಬೂಬಕರ್(ರ) ತೋರಿಸಿದ ಧೀರತೆಯನ್ನು ನೋಡಿಕೊಂಡು ತಮ್ಮ ವಿಶ್ವಾಸ ಮತ್ತು ಅರಿವಿನಲ್ಲಿ ಅಭಿವೃದ್ಧಿ ಹೊಂದುವವರಾಗಲಿ.

ಈ ಪತ್ರವು ಖಲೀಫತುರ್‍ರಸೂಲ್ ಆದ ಅಬೂಬಕರ್ ಕಡೆಯಿಂದ ಎಲ್ಲ ವಿಶಿಷ್ಟ ಮತ್ತು ಸಾಮಾನ್ಯ ವ್ಯಕ್ತಿಗಳಿಗೆ ಆಗಿದೆ..... ಅಲ್ಲಾಹನು ಮುಹಮ್ಮದ್ ರಸೂಲುಲ್ಲಾಹ್(ಸ)ರನ್ನು ತನ್ನ ವತಿಯಿಂದ ಸತ್ಯವನ್ನು ನೀಡಿಕೊಂಡು ತನ್ನ ಸೃಷ್ಟಿಗಳ ಕಡೆಗೆ ಸುವಾರ್ತೆಗಾರನೂ ಮುನ್ನೆಚ್ಚರಿಕೆಗಾರನೂ ಅಲ್ಲಾಹನ ಕಡೆಗೆ ಅವನ ಆದೇಶ ಪ್ರಕಾರ ಕರೆಯುವವನೂ ಹಾಗೂ ಬೆಳಗಿಸುವ ಸೂರ್ಯನ ಹಾಗೆಯೂ ಕಳುಹಿಸಿರುವನು. ಜೀವಂತವಾಗಿ ಇರುವವರಿಗೆ ಮುನ್ನೆಚ್ಚರಿಕೆ ನೀಡಲು ಮತ್ತು ಸತ್ಯನಿಷೇಧಿಗಳ ಕುರಿತು ಹೇಳಿದ ಮಾತುಗಳು ಈಡೇರುವಂತಾಗಲು ಅಲ್ಲಾಹನು ಹಝ್ರತ್ ಪೈಗಂಬರ್(ಸ)ರನ್ನು ಕಳುಹಿಸಿದನು. ಹಝ್ರತ್ ಪೈಗಂಬರ್(ಸ)ರನ್ನು ನಂಬಿದವರನ್ನು ಅಲ್ಲಾಹನು ಸತ್ಯದೊಂದಿಗೆ ಮಾರ್ಗದರ್ಶನ ಮಾಡಿದನು. ಯಾರು ಹಝ್ರತ್ ಪೈಗಂಬರ್(ಸ)ರಿಂದ ಬೆನ್ನು ತಿರುಗಿಸಿದರೋ ಅವರೊಂದಿಗೆ ಅವರು ಇಷ್ಟದಿಂದ ಅಥವಾ ಅನಿಷ್ಟದಿಂದ ಇಸ್ಲಾಮಿಗೆ ಬರುವ ತನಕ ಹಝ್ರತ್ ಪೈಗಂಬರ್(ಸ) ಸಮರ ಹೂಡಿದರು. ಅನಂತರ ಹಝ್ರತ್ ಪೈಗಂಬರ್(ಸ) ನಿಧನರಾದರು. ಹಝ್ರತ್ ಪೈಗಂಬರ್(ಸ) ಅಲ್ಲಾಹನ ಆದೇಶಗಳನ್ನು ಕಾರ್ಯಗತಗೊಳಿಸಿದರು ಮತ್ತು ಸಮುದಾಯಕ್ಕೆ ಒಳಿತನ್ನು ಮಾಡಿದರು. ಅವರಿಗೆ ಒಪ್ಪಿಸಲಾದ ಜವಾಬ್ದಾರಿಯನ್ನು ಅವರು ಈಡೇರಿಸಿದರು. ಅವರ ಮೇಲೆ ಮತ್ತು ಮುಸ್ಲಿಮರ ಮೇಲೆ ಅಲ್ಲಾಹನು ಈ ಗ್ರಂಥದಲ್ಲಿ ಅವತೀರ್ಣಗೊಳಿಸಿದ್ದನ್ನು ಸ್ಪಷ್ಟವಾಗಿ ವಿವರಿಸಿದರು..... ನಾನು ನಿಮ್ಮೊಡನೆ ದೇವಭಕ್ತಿ ಕೈಗೊಳ್ಳಲು, ನಿಮಗೆ ಅಲ್ಲಾಹನು ನಿಶ್ಚಯಿಸಿದ ಸೌಭಾಗ್ಯವನ್ನು ಪಡೆಯಲು ಮತ್ತು ನಿಮ್ಮ ಪೈಗಂಬರ್(ಸ) ನಿಮ್ಮ ಬಳಿಗೆ ತಂದ ಆ ಬೋಧನೆಗಳನ್ನು ಅನುಸರಿಸಲು ತಾಕೀತು ಮಾಡುತ್ತೇನೆ ಹಾಗೂ ನೀವು ಹಝ್ರತ್ ಪೈಗಂಬರ್(ಸ)ರ ಮಾರ್ಗದರ್ಶನ ಪ್ರಕಾರ ಮಾರ್ಗದರ್ಶನ ಗಳಿಸಿರಿ ಮತ್ತು ಅಲ್ಲಾಹನ ಧರ್ಮವನ್ನು ಸುದೃಢವಾಗಿ ಹಿಡಿಯಿರಿ. ಏಕೆಂದರೆ ಅಲ್ಲಾಹನು ಯಾರಿಗೆ ಹಿದಾಯತ್ ನೀಡಿಲ್ಲವೋ ಅವನು ದಾರಿತಪ್ಪಿದವನಾಗಿದ್ದಾನೆ. ಅಲ್ಲಾಹನ ಸಂರಕ್ಷಣೆ ಲಭಿಸದ ಪ್ರತಿಯೊಬ್ಬ ವ್ಯಕ್ತಿ ವಿಪತ್ತುಗಳಿಗೆ ಸಿಲುಕುವನು. ಅವನು ನೆರವು ನೀಡದ ಪ್ರತಿಯೊಬ್ಬ ವ್ಯಕ್ತಿ ನಿಸ್ಸಹಾಯಕನಾಗಿರುವನು. ಆದ್ದರಿಂದ ಯಾರಿಗೆ ಅಲ್ಲಾಹನು ಸನ್ಮಾರ್ಗ ನೀಡುವನೋ ಅವನೇ ಸನ್ಮಾರ್ಗಿ. ಯಾರನ್ನು ಅಲ್ಲಾಹನು ದಾರಿ ತಪ್ಪಿದವನೆಂದು ತೀರ್ಮಾನಿಸುತ್ತಾನೋ ಅವನೇ ದುರ್ಮಾರ್ಗಿ...... ಲೋಕದಲ್ಲಿ ಅವನಿಗೆ ಏನಾಯಿತು? ಅವನು ಇಸ್ಲಾಂ ಧರ್ಮವನ್ನು ನಂಬದ ತನಕ ಅವನ ಯಾವುದೇ ಸತ್ಕರ್ಮ ಸ್ವೀಕರಿಸಲ್ಪಡದು. ಪರಲೋಕದಲ್ಲಿ ಅವನ ವತಿಯಿಂದ ಯಾವುದೇ ನಷ್ಟಭರ್ತಿ ಮತ್ತು ಪ್ರತಿಫಲ ಸ್ವೀಕರಿಸಲ್ಪಡದು. ನಿಮ್ಮಲ್ಲಿ ಕೆಲವರು ಇಸ್ಲಾಂ ಧರ್ಮವನ್ನು ನಂಬಿದ ಮತ್ತು ಅದರ ಪ್ರಕಾರ ನಡೆದ ನಂತರ ಅಲ್ಲಾಹನಿಗೆ ಮೋಸಮಾಡುತ್ತಾ ಮತ್ತು ಅವನ ವಿಷಯದಲ್ಲಿ ಮೂಢತನ ತೋರಿಸುತ್ತಾ ಹಾಗೂ ಶೈತಾನನ ಮಾತನ್ನು ಒಪ್ಪುತ್ತಾ ತಮ್ಮ ಧರ್ಮದಿಂದ ಹಿಂತಿರುಗಿ ಹೋಗಿದ್ದೀರಿ ಎಂದು ನನಗೆ ಮಾಹಿತಿ ಲಭಿಸಿದೆ..... ನಾನು ಮುಹಾಜಿರ್, ಅನ್ಸಾರ್ ಮತ್ತು ಅತ್ಯುತ್ತಮ ಸತ್ಕರ್ಮಗಳೊಂದಿಗೆ ಅನುಸರಿಸುವ ವಿಧೇಯರ ಸೈನ್ಯದ ಮೇಲೆ ಒಬ್ಬ ವ್ಯಕ್ತಿಯನ್ನು ಸೇನಾಧಿಪತಿಯನ್ನಾಗಿ ನೇಮಿಸಿ ನಿಮ್ಮ ಕಡೆಗೆ ಕಳುಹಿಸಿದ್ದೇನೆ. ಅಲ್ಲಾಹನ ಸಂದೇಶದ ಕಡೆಗೆ ಕರೆಯದೇ ಯಾರೊಂದಿಗೂ ಯುದ್ಧ ಮಾಡಬಾರದೆಂದೂ ಯಾರನ್ನೂ ಕೊಲ್ಲಬಾರದೆಂದೂ ನಾನು ಅವರಿಗೆ ಆದೇಶ ನೀಡಿದ್ದೇನೆ. ಅದೇ ರೀತಿ, ಯಾರು ಈ ಸಂದೇಶವನ್ನು ಅಂಗೀಕರಿಸುವನೋ ಮತ್ತು ಒಪ್ಪುವನೋ ಹಾಗೂ ಪಿತೂರಿಯಿಂದ ಹಿಂದಕ್ಕೆ ಸರಿಯುವನೋ ಮತ್ತು ಸತ್ಕರ್ಮ ಮಾಡುವನೋ ಅವನನ್ನು ಸ್ವೀಕಾರ ಮಾಡಲು ಹಾಗೂ ಅವನಿಗೆ ಸಹಾಯ ಮಾಡಲು ಸಹ ನಾನು ಅವರಿಗೆ ಆದೇಶ ನೀಡಿದ್ದೇನೆ. ಯಾರು ನಿರಾಕರಿಸುತ್ತಾರೋ ಅವರೊಂದಿಗೆ ಈ ವಿಷಯದಲ್ಲಿ ಯುದ್ಧ ಮಾಡಲು ಮತ್ತು ಸಿಕ್ಕಿದವರಲ್ಲಿ ಯಾರನ್ನೂ ಬಾಕಿಯುಳಿಸದಿರಲು ಅಥವಾ ಅವರನ್ನು ಬೆಂಕಿಯಿಂದ ಸುಟ್ಟು ಹಾಕಲು ಮತ್ತು ಪ್ರತಿಯೊಂದು ರೀತಿಯಲ್ಲಿ ಅವರನ್ನು ವಧಿಸಲು ಹಾಗೂ ಮಹಿಳೆಯರನ್ನು ಮತ್ತು ಮಕ್ಕಳನ್ನು ಬಂಧಿಸಲು ಹಾಗೂ ಯಾರೊಡನೆಯೂ ಇಸ್ಲಾಮಲ್ಲದೇ ಬೇರೇನನ್ನೂ ಸ್ವೀಕರಿಸದಿರಲು ನಾನು ಅವರಿಗೆ ಆದೇಶ ನೀಡಿದ್ದೇನೆ. ಅನಂತರ ಯಾರು ಅವರ ಅನುಸರಣೆ ಮಾಡುತ್ತಾರೋ ಅದು ಅವರಿಗೆ ಒಳ್ಳೆಯದು. ಯಾರು ಅದನ್ನು ಬಿಟ್ಟುಬಿಡುತ್ತಾನೋ ಅವನು

ಅಲ್ಲಾಹನನ್ನು ನಿಸ್ಸಹಾಯಕನನ್ನಾಗಿ ಮಾಡಲು ಸಾಧ್ಯವಲ್ಲ. ನನ್ನ ಈ ಪತ್ರವನ್ನು ನಿಮ್ಮ ಎಲ್ಲ ಸಭೆಗಳಲ್ಲಿ ಓದಿ ಹೇಳಲು ನಾನು ನನ್ನ ದೂತರನ್ನು ಆಜ್ಞಾಪಿಸಿದ್ದೇನೆ. ಅಧ಼ಾನೇ ಇಸ್ಲಾಮಿನ ಘೋಷಣೆಯಾಗಿದೆ. ಆದ್ದರಿಂದ ಮುಸ್ಲಿಮನು ಅಧ಼ಾನ್ ಕೊಡುವಾಗ ಅವರು ಸಹ ಅಧ಼ಾನ್ ನೀಡಲಿ ಹಾಗೂ ಅವರ ಮೇಲೆ ದಾಳಿ ಮಾಡುವುದನ್ನು ನಿಲ್ಲಿಸಬೇಕು. ಅವರು ಅಧ಼ಾನ್ ನೀಡದಿದ್ದರೆ ಅವರ ಮೇಲೆ ಬೇಗನೇ ದಾಳಿ ನಡೆಸಿರಿ. ಅವರು ಅಧ಼ಾನ್ ನೀಡಿದರೆ ಅವರ ಮೇಲೆ ಕಡ್ಡಾಯವಾದುದನ್ನು ಕೇಳಿ ಪಡೆಯಿರಿ. ಅವರು ನಿರಾಕರಿಸಿದರೆ, ಅವರ ಮೇಲೆ ಬೇಗನೇ ದಾಳಿ ನಡೆಸಿರಿ. ಅವರು ಒಪ್ಪಿದರೆ, ಅವರಿಂದ ಸ್ವೀಕಾರ ಮಾಡಿರಿ.

ಹಝ್ರ಼ತ್ ಅಬೂಬಕರ್(ರ) ಎರಡನೇ ಪತ್ರವನ್ನು ಹನ್ನೊಂದು ಸೇನಾಧಿಪತಿಗಳ ಹೆಸರುಗಳಲ್ಲಿ ಬರೆದಿದ್ದರು. ಪ್ರತಿಯೊಬ್ಬ ಸೇನಾಧಿಪತಿಗೆ ತಾಕೀತಾಗಿ ಹೀಗೆ ಆದೇಶ ನೀಡಿದರು: ಅವರು ಪ್ರತಿಯೊಂದು ವಿಷಯದಲ್ಲಿ ಬಾಹ್ಯ ಮತ್ತು ಅಂತರಂಗದಲ್ಲಿ ಅಲ್ಲಾಹನ ಭಯಭಕ್ತಿ ಇರಿಸಬೇಕು. ಅಲ್ಲಾಹನ ವಿಷಯದಲ್ಲಿ ಕಠಿಣ ಪ್ರಯತ್ನ ಮಾಡಲು ಅವರಿಗೆ ಸಾಧ್ಯವಾದಷ್ಟು ಮಾಡಲಿ. ಯಾರು ಅಲ್ಲಾಹನಿಂದ ಬೆನ್ನು ತಿರುಗಿಸಿದರೋ ಮತ್ತು ಇಸ್ಲಾಂ ಧರ್ಮದಿಂದ ಹಿಮ್ಮೆಟ್ಟಿ ಪೈಶಾಚಿಕ ಆಸೆಗಳನ್ನು ಕೈಗೊಂಡಿರುವರೋ ಹಾಗೂ ಯಾರ ವಿರುದ್ಧ ಜಿಹಾದ್ ಮಾಡಲು ಆದೇಶ ನೀಡಲಾಗಿದೆಯೋ ಮೊತ್ತಮೊದಲು ಅವರಿಗೆ ಇಸ್ಲಾಮಿನ ಸಂದೇಶವನ್ನು ಚೆನ್ನಾಗಿ ತಲುಪಿಸಿರಿ. ಅವರು ಅದನ್ನು ಅಂಗೀಕರಿಸಿದರೆ, ಅವರೊಂದಿಗೆ ಯುದ್ಧ ಮಾಡುವುದರಿಂದ ತಡೆದು ನಿಲ್ಲಿರಿ. ಅವರು ಅದನ್ನು ಸ್ವೀಕಾರ ಮಾಡದಿದ್ದರೆ, ಅವರ ಮೇಲೆ ತಕ್ಷಣವೇ ದಾಳಿ ಮಾಡಿರಿ. ಅವರು ನಿಮ್ಮ ಮುಂದೆ ಶರಣಾಗುವ ವರೆಗೂ ಅದನ್ನು ಮುಂದುವರೆಸಿರಿ. ಅನಂತರ ಅವರೊಡನೆ ಅವರ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಹೇಳಿಕೊಡಿರಿ. ಅವರಿಗೆ ಕಡ್ಡಾಯವಾದುದನ್ನು ಅವರಿಂದ ವಸೂಲು ಮಾಡಿರಿ. ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ಕೊಡಿರಿ. ಯಾರು ನಿರಾಕರಿಸುತ್ತಾರೋ ಅವರೊಡನೆ ಯುದ್ಧ ಮಾಡಿರಿ. ಅಲ್ಲಾಹನು ಈ ಶತ್ರುಗಳ ಮೇಲೆ ವಿಜಯ ನೀಡಿದರೆ, ಅವರನ್ನು ಅತ್ಯಂತ ಹೀನಾಯವಾಗಿ ವಧಿಸಿರಿ.

ಡಾಕ್ಟರ್ ಅಲಿ ಮುಹಮ್ಮದ ಸಲಾಬಿ ಬರೆಯುತ್ತಾರೆ: ಧರ್ಮತ್ಯಾಗಿಗಳನ್ನು ಮತ್ತು ವಿದ್ರೋಹಿಗಳನ್ನು ಬೆಂಕಿಯಿಂದ ಸುಡಲು ಈ ಪತ್ರದಲ್ಲಿ ಹೇಳಲಾಗಿದೆ. ಯಾರಿಗೂ ಬೆಂಕಿಯಿಂದ ಸುಟ್ಟು ಹಾಕುವ ಶಿಕ್ಷೆ ನೀಡುವುದು ಅನುಮತನೀಯವಲ್ಲ. ಬೆಂಕಿಯಿಂದ ಶಿಕ್ಷೆ ನೀಡುವುದು ಕೇವಲ ಅಲ್ಲಾಹನ ಕೆಲಸವಾಗಿದೆ. ಆದರೆ ಇಲ್ಲಿ ಅವರನ್ನು ಸುಟ್ಟು ಹಾಕಲು ಆದೇಶ ಕೊಡಲು ಕಾರಣವೇನೆಂದರೆ, ಆ ದುಷ್ಟರು ಸತ್ಯವಿಶ್ವಾಸಿಗಳೊಂದಿಗೆ ಇದೇ ರೀತಿಯಾಗಿ ವರ್ತಿಸಿದರು. ಆದ್ದರಿಂದ ಪ್ರತೀಕಾರ ನಡೆವಳಿಕೆ ಎಂಬಂತೆ ಹೀಗೆ ಮಾಡಲಾಗಿತ್ತು.

ಒಬ್ಬನು ಮಾಡುವ ಕೃತ್ಯದ ಪ್ರಕಾರವೇ ಅವನಿಗೆ ಪ್ರತೀಕಾರವೆಂಬಂತೆ ಶಿಕ್ಷೆ ನೀಡಬೇಕು ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿರುವನು. ವಿದ್ರೋಹಿಗಳು ಮುಸ್ಲಿಮರನ್ನು ಸುಟ್ಟುಹಾಕುವ ಮತ್ತು ಅವರನ್ನು ಹೀನಾಯವಾದ ರೀತಿಯಲ್ಲಿ ಕೊಲ್ಲುವ ಅಪರಾಧವನ್ನು ಮಾಡಿದ್ದರು. ಆದ್ದರಿಂದ ಹಝ್ರ಼ತ್ ಅಬೂಬಕರ್(ರ) ಅವರನ್ನು ಅದೇ ರೀತಿಯಲ್ಲಿ ವಧಿಸಲು ಮತ್ತು ಮುಸ್ಲಿಮರೊಂದಿಗೆ ವರ್ತಿಸಿದ ರೀತಿಯಲ್ಲೇ ಅವರೊಂದಿಗೆ ವರ್ತಿಸಲು ಆದೇಶ ನೀಡಿದ್ದರು.

(ಕೊನೆಗೆ ಹುಝೂ಼ರ್ ಹೇಳಿದರು:) ಈ ಪ್ರಸ್ತಾಪ ಮುಂದುವರೆಯುವುದು – ಇನ್‌ಶಾ ಅಲ್ಲಾಹ್. ರಮಝಾ಼ನಿನಲ್ಲಿ ಬಹುಶಃ ಬೇರೆ ವಿಷಯಗಳಲ್ಲೂ ಖುತ್ಬಗಳು ಇರಬಹುದು. ಆದ್ದರಿಂದ ತಡವಾಗಿಯಾದರೂ ಈ ವಿಷಯವಾಗಿ ಮುಂದೆ ಬರುವ ಖುತ್ಬಗಳಲ್ಲಿ ವಿವರಣೆ ನೀಡಲಾಗುವುದು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 15-04-2022*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon